ನೀಡಬಹುದಾದ ಬಾಡಿಗೆಯನ್ನು ಇಲಾಖೆಯ ಸಂಯುಕ್ತ ಪ್ರಕಾರ ಒಂದು ಚದರ ಅಡಿಗೆ 1.14 ರೂ.ಗಳಿಂದ 1.50ವರೆಗೆ ಅಂದಾಜು ಮಾಡಿದ್ದು, ಆದರೆ ಅಕ್ಕಪಕ್ಕದ ಕಟ್ಟಡಗಳಿಗೆ ಒಂದು ಚದರ ಅಡಿಗೆ 5 ರೂ.ಗಳಿಂದ 5.50 ರೂ.ಗಳವರೆಗೆ ಮಾರುಕಟ್ಟೆ ದರ ನಿಗದಿಯಾಗಿರುವುದಾಗಿ ತಿಳಿಸಿ ಇಲಾಖೆಯು ನಿಗದಿ ಮಾಡಿದ ಸಂಯುಕ್ತ ಬಾಡಿಗೆಗಿಂತ ಹೆಚ್ಚಿನ ಬಾಡಿಗೆಗಾದರೆ ಸರ್ಕಾರದ ಅನುಮತಿ ಪಡೆಯಲು ಸೂಚಿಸಿದ್ದರಿಂದ ಸರ್ಕಾರವು ದಿನಾಂಕ 25-10-89 ಆಜ್ಞೆ ಸಂಖ್ಯೆ .ಸಿಐ. 138 ಎಂಜಿಎಸ್ 89 (1) ರಲ್ಲಿ ಈ ಕಟ್ಟಡಕ್ಕೆ 5.15 ರೂ. ಗಳ ಬಾಡಿಗೆಯ ಮೇಲೆ ತೆಗೆದುಕೊಳ್ಳಲು ಅನುಮತಿ ನೀಡಿದ್ದರಿಂದ ಇಲಾಖೆಯ ಕೇಂದ್ರ ಕಛೇರಿಯನ್ನು ನಂ. 16 ಎಸ್. ಪಿ. ಕಾಂಪ್ಲೆಕ್ಸ್, ಲಾಲ್‌ಬಾಗ್ ರಸ್ತೆ, ಬೆಂಗಳೂರು-27 ಇಲ್ಲಿಗೆ ದಿನಾಂಕ 1-12-89 ರಂದು ಸ್ಥಳಾಂತರಿಸಲಾಯಿತು.

ಉ) ಯಾವುದೇ ಅವ್ಯವಹಾರ ನಡೆದ ಬಗ್ಗೆ ಮಾಹಿತಿ ಇಲ್ಲ.

ವಿಷಯ :- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವಲ್ಲಿ ವಿಳಂಬ.

Q: 1246

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಸಮಾಜ ಕಲ್ಯಾಣ ಇಲಾಖೆಯವರು ರಾಜ್ಯದಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಕಾಲೇಜು, ತಾಂತ್ರಿಕ ಕಾಲೇಜು, ವೈದ್ಯಕೀಯ ಕಾಲೇಜು, ವ್ಯವಸಾಯ ಕಾಲೇಜು ಮತ್ತಿತರ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನವನ್ನು ವರ್ಷದ ಕೊನೆಯಲ್ಲಿ ಕೊಡುತ್ತಿರುವುದು ನಿಜವೇ?

ಆ) ಅನೇಕ ವಿದ್ಯಾರ್ಥಿಗಳು ಓದಲು ಹಣದ ಅನುಕೂಲತೆ ಇಲ್ಲದೆ ಹಾಗೂ ವಿದ್ಯಾರ್ಥಿವೇತನ ಬಾರದಿರುವುದರಿಂದ ಕಾಲೇಜುಗಳನ್ನು ಬಿಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ವಿದ್ಯಾರ್ಥಿವೇತನ ಕೊಡುವ ಮೂಲ ಉದ್ದೇಶ ಏನು, ಹಾಗೂ ವರ್ಷದ ಕೊನೆಯಲ್ಲಿ ಕೊಡುತ್ತಿರುವುದರ ಉದ್ದೇಶವೇನು?

ಈ) ಪ್ರಥಮ ದರ್ಜೆ ಹಾಗೂ ರ್‍ಯಾಂಕ್ ಬಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಕ ಬಹುಮಾನ ವಿತರಣೆ ಸರ್ಕಾರ ಮಾಡುತ್ತಿದೆಯೇ?

ಉ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷ ಈ ಪ್ರೋತ್ಸಾಹ ಬಹುಮಾನ ಕೊಡಲಾಗುವ ಹಾಗೂ ಪಡೆದವರ ಸಂಖ್ಯೆ ಎಷ್ಟು? (ವಿವರ ನೀಡುವುದು).

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮುಂದುವರಿಸಲು ನೆರವಾಗುವ ದೃಷ್ಟಿಯಿಂದ ವಿದ್ಯಾರ್ಥಿವೇತನ ಬಿಡುಗಡೆ ಮಾಡಲಾಗುತ್ತಿದೆ. ವಿದ್ಯಾರ್ಥಿ : ವಿದ್ಯಾರ್ಥಿನಿಯರು ವಿದ್ಯಾರ್ಥಿವೇತನ ಬಿಡುಗಡೆಗಾಗಿ ಬೇಕಾಗಿರುವ ನಿಗದಿತ ಹಾಜರಾತಿ ಹೊಂದಿದ ಕೂಡಲೆ ವಿದ್ಯಾರ್ಥಿವೇತನವನ್ನು ನೀಡಲಾಗುತ್ತಿದೆ. ಈ ಬಗ್ಗೆ ವಿಳಂಬ ಮಾಡಬಾರದೆಂದು ಸಂಬಂಧಿಸಿದವರಿಗೆ ಸೂಚನೆಗಳನ್ನು ನೀಡಲಾಗಿದೆ.

ಈ) ಹೌದು.

ಉ)

ವರ್ಷ	ಬಹುಮಾನ ಪಡೆದ ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು ಖರ್ಚು (ಲಕ್ಷ ರೂ. ಗಳಲ್ಲಿ)
ಅ)	ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳು :	
1989-90	1306	6.62
1990-91	2018	10.39
1991-92	3271	16.59
ಆ)	ಕಾಲೇಜು ವಿದ್ಯಾರ್ಥಿಗಳು :	
1989-90	710	6.54
1990-91	816	7.52
1991-92	1628	10.67

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ.

ವಿಷಯ :- ಕುಷ್ಟಗಿ ತಾಲ್ಲೂಕಿನ ಮಲಘಟ್ಟ ಗ್ರಾಮದ ದೇವದಾಸಿ ಕರಿಯಕ್ಕನ ಮಗಳು ಶರಣಮ್ಮ (20 ವರ್ಷ) ಎಂಬುವಳ ಮೇಲೆ ಅತ್ಯಾಚಾರದ ಬಗ್ಗೆ ಕುರಿತು.

* ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ಕೂಡ ತಲೆತಗ್ಗಿಸುವ ವಿಚಾರ ಏನು ನಡೆದಿದೆ, ಆ ವಿಚಾರದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ನಾನು, ಮಾನ್ಯ ಈಶ್ವರಪ್ಪನವರು ಮತ್ತು ಬಸವರಾಜರಾಯ ರೆಡ್ಡಿ ನಾವೆಲ್ಲರೂ ಸಹಿತ ಕಳಿಸಿದ್ದೇವೆ. ಇದನ್ನು ಇಂದು ಪ್ರಶ್ನೋತ್ತರ ವೇಳೆಯಲ್ಲಿ ಪ್ರಸ್ತಾಪಿಸಿದ್ದೇವೆ. ನಮ್ಮ ಜೊತೆಯಲ್ಲಿ ಈ ಕಡೆ ಸಾಲಿನಲ್ಲಿ ಕುಳಿತಿರತಕ್ಕಂಥ ವಾಟಾಳ್ ನಾಗರಾಜರು, ಸನ್ಮಾನ್ಯ ಯಡಿಯೂರಪ್ಪನವರು, ಸನ್ಮಾನ್ಯ ಬೈರೇಗೌಡರು- ಹೀಗೆ ನಾವೆಲ್ಲರೂ ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಮಾನ್ಯ ಅಧ್ಯಕ್ಷರೇ, ಶರಣಮ್ಮ ಎಂಬ 20 ವರ್ಷದ, ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮಲಘಟ್ಟ ಗ್ರಾಮದ ದೇವದಾಸಿ ಕರಿಯಕ್ಕನ ಮಗಳು. ಈಕೆ ಒಬ್ಬ ಅಂಗನವಾಡಿ ಕಾರ್ಯಕರ್ತೆ. ಈಕೆಯನ್ನು ಕುಷ್ಟಗಿ ತಾಲ್ಲೂಕಿನ, ಸರ್ಕಾರದ ಮೂರು ಜನ